**ಪುಟ ಬಂಗಾರ**

# ಅಣ್ಣ - ಬಾಪು



## ಸಿಂಪಿ ಲಿಂಗಣ್ಣ

ಕಲೆ: ಬಸವರಾಜ ಕಲೆಗಾರ

**‘ಒಂದು ಭಕ್ತಿಯ ಹೆಣ್ಣು ದಾರಿ; ಇನ್ನೊಂದು ಕರ್ಮದ ಗಂಡುದಾರಿ’—ಈ ದಾರಿಗಳೆರಡರ ಅಪೂರ್ವಸಂಗಮ ‘ಅಣ್ಣ—ಬಾಪು’ ಏಕಾಂಕ.**

ಬಾಪು: ಬಸವಣ್ಣನವರೇ, ನೀವು ಕರ್ನಾಟಕದವರೆಂದು ನನಗೆ ಇತ್ತೀಚೆಗೆ ಗೊತ್ತಾಯಿತು. ಕರ್ನಾಟಕವು ಗಾಂಧೀಪ್ರಾಂತವೆನಿಸುವುದರಿಂದ ನನಗೆ ನೀವು ತೀರ ಹತ್ತುಗಡೆಯವರಾದಿರಿ.

ಅಣ್ಣ: ಕೂಡಲಸಂಗಮದೇವರ ಕೃಪೆಯಿಂದ ನನಗೆ ಕರ್ನಾಟಕವು ಕಾರ್ಯಕ್ಷೇತ್ರವಾಗಿತ್ತು. ನಿಮಗೆ ರಘುಪತಿ ರಾಘವನ ಕೃಪೆಯಿಂದ ಭಾರತವು ಕಾರ್ಯಕ್ಷೇತ್ರವಾಯಿತು. ನೀವು ಭಾರತಕ್ಕೇ ಬಾಪೂ ಅನಿಸಿದವರು, ನನಗೂ ಅಕ್ಕರೆಯ ಬಾಪೂಜಿಯೇ. ಅಂದಮೇಲೆ ಹತ್ತುಗಡೆಯ ಪ್ರಶ್ನೆಯೆಲ್ಲಿ ಉಳಿಯಿತು?

ಬಾಪು: ನಾನು ಭೂಮಿಯ ಮೇಲಿದ್ದಾಗಲೇ ನಿಮ್ಮ ತತ್ತ್ವ ಪರಿಚಯವಾಗಬೇಕಿತ್ತು. ಅಂಥ ಸುಸಂಧಿ ದೊರಕಿದ್ದರೆ ಕಲ್ಯಾಣರಾಜ್ಯ ಕಟ್ಟಿದ ನಿಮ್ಮ ಕಾರ್ಯಪ್ರಣಾಲಿಯನ್ನು ಅಭ್ಯಸಿಸುತ್ತಿದ್ದೆ; ಅನುಸರಿಸುತ್ತಿದ್ದೆ.

ಅಣ್ಣ: ಆತ್ಮಕಲ್ಯಾಣದ ಸಾಹಸ ಮಾಡುವಾಗ ಸಮಾಜಶುದ್ಧೀಕರಣ ನಡೆದು ಕಲ್ಯಾಣರಾಜ್ಯ ಕಾಣಿಸಿಕೊಂಡಿತು. ನಿಮ್ಮದು ರಾಮರಾಜ್ಯ ಕಟ್ಟುವ ಎತ್ತುಗಡೆ.

ಬಾಪು: ರಾಮರಾಜ್ಯ ಕಟ್ಟುವ ಎತ್ತುಗಡೆಯೆಂದರೆ ‘ಆತ್ಮ ಸಂಶೋಧನ’ದ ಸಾಹಸವೇ ಸರಿ. ನಾನು ಸತ್ಯ ಪರಮೇಶ್ವರನನ್ನು ಕಾಣುವ ಗುರಿಯನ್ನೇ ಇರಿಸಿಕೊಂಡಿದ್ದೆನು.

ಅಣ್ಣ: ಅಹುದು. ‘ಕೂಡಲ ಸಂಗಯ್ಯನು ಒಲಿದಾನೋ ಇಲ್ಲವೋ ಎಂಬ ಚಿಂತೆ’ಯೇ ನನ್ನ ಸರ್ವಸಾಧನಗಳಿಗೆ ತಳಹದಿಯಾಗಿದ್ದಂತೆ, ನೀವು ಆತ್ಮ ಸಂಶೋಧನದ ದಾರಿಯಲ್ಲಿ ನಡೆದು ‘ಮಹಾತ್ಮ’ರಾದಿರಿ. ನಾನು ಸಂಗನ ಬಸವಣ್ಣನಾದೆನು.

ಬಾಪು: ಸಂಗನ ಬಸವಣ್ಣನಾದಂತೆ ನೀವು ಭಕ್ತಿಭಾಂಡಾರಿಯೂ ಆದಿರಿ. ‘ಶಿವನೇ ಬಸವ, ಬಸವಾ ಶಿವನೇ’ ಅನಿಸಿದಿರಿ.

ಅಣ್ಣ: ನನಗೆ ಸಂಗಮದೇವನ ಮುಂಬಲವಿದ್ದಂತೆ ನಿಮಗೆ ಅಂತರಾತ್ಮನ ಬೆಂಬಲವಿತ್ತು.

ಬಾಪು: ನೀವು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದ ಮಡಿಯಲ್ಲಿ ಮೊಳೆಸಿದ ಅಗಿಗಳನ್ನೇ ಭಾರತದ ತೋಟದಲ್ಲೆಲ್ಲ ಊರುವ ಕೆಲಸವನ್ನು ನಾನು ಮಾಡಿದೆನೆಂದು ಹೇಳಬಹುದು.

ಅಣ್ಣ: ನೂರು ವರ್ಷಗಳಲ್ಲಿಯೂ ಮುಗಿಯದ ಕೆಲಸವನ್ನು ನೀವು ಹತ್ತಿಪ್ಪತ್ತು ವರುಷಗಳಲ್ಲಿ ಪೂರ್ತಿಗೊಳಿಸಿದ್ದು ಸಾಮಾನ್ಯ ಕೆಲಸವೇ? ಅದೆಷ್ಟು ತ್ಯಾಗ? ಅದೆಂಥ ತಪಸ್ಸು? ಅದೇನು ಪ್ರಾರ್ಥನೆ?

ಬಾಪು: ನಿಮ್ಮ ಭಕ್ತಿಭಾಂಡಾರದ ಒಂದಂಶವಾದರೂ ನನ್ನಲ್ಲಿದ್ದಿದ್ದರೆ, ನನ್ನ ಬಣ್ಣವೇ ಬೇರೆ ಆಗುತ್ತಿತ್ತು, ನನ್ನ ಬದುಕಿನ ಬಗೆಯೇ ಬೇರೆಯಾಗುತ್ತಿತ್ತು!

ಅಣ್ಣ: ನಿಮ್ಮಲ್ಲಿ ಭಕ್ತಿಯಿರಲಿಲ್ಲೆಂದು ಹೇಳುವಿರಾ? ಆ ಭಕ್ತಿಯ ಬಲದಿಂದಲೇ ನೀವು ರಾಜತಂತ್ರದಲ್ಲಿ ಬರಿಗೈಯಿಂದ ಹೋರಾಡಿದಿರಿ. ತೋಳಬಲಕ್ಕೆ ಅಸಾಧ್ಯವಾದ ದಾನವಶಕ್ತಿಯನ್ನು ಪ್ರೇಮಬಲದಿಂದ